**ಕನ್ನಡ ವಿಶ್ವವಿದ್ಯಾಲಯ, ಹಂಪಿ**
**ವಿದ್ಯಾರಣ್ಯ**

**ಏಪ್ರಿಲ್ ೧೮, ೨೦೧೭ರ ಮಂಗಳವಾರದಂದು ನಡೆದ ಕಾರ್ಯಕಾರಿ ಸಮಿತಿಯ ೧೮೭ನೇ ಸಭೆಯ ನಡೆವಳಿಗಳು**

**ಸಭೆಯಲ್ಲಿ ಹಾಜರಿದ್ದವರು**

| | | |
|---|---|---|
| ೧. | ಡಾ.ಮಲ್ಲಿಕಾ. ಎಸ್.ಘಂಟಿ, ಮಾನ್ಯ ಕುಲಪತಿಗಳು, ಕ.ವಿ.ಹಂ. | ಅಧ್ಯಕ್ಷರು |
| ೨. | ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ, ಬೆಂಗಳೂರು | ಸದಸ್ಯರು |
| ೩. | ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು | ಸದಸ್ಯರು |
| ೪. | ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು | ಸದಸ್ಯರು |
| ೫. | ಡಾ. ಎ. ಮೋಹನ ಕುಂಟಾರ್, ಡೀನ್, ಭಾಷಾ ನಿಕಾಯ, ಕ.ವಿ.ಹಂ. | ಸದಸ್ಯರು |
| ೬. | ಡಾ. ಅಶೋಕಕುಮಾರ್ ರಂಜೇರೆ, ಡೀನ್, ಲಲಿತಕಲೆಗಳ ನಿಕಾಯ, ಕ.ವಿ.ಹಂ | ಸದಸ್ಯರು |
| ೭ | ಡಾ. ಸಿ.ಮಹದೇವ, ಡೀನ್, ವಿಜ್ಞಾನಗಳ ನಿಕಾಯ, ಕ.ವಿ.ಹಂ. | ಸದಸ್ಯರು |
| ೮. | ಡಾ. ಪಿ. ಮಹಾದೇವಯ್ಯ, ಹಣಕಾಸು ಅಧಿಕಾರಿಗಳು, ಕ.ವಿ.ಹಂ | ಆಹ್ವಾನಿತ ಸದಸ್ಯರು |
| ೯. | ಕುಲಸಚಿವರು, ಕ.ವಿ.ಹಂ | ಸದಸ್ಯ ಕಾರ್ಯದರ್ಶಿ |

**ಸಭೆಯಲ್ಲಿ ಅನುಪಸ್ಥಿತರಿದ್ದವರು**

| | | |
|---|---|---|
| ೧. | ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಹಣಕಾಸು ಇಲಾಖೆ, ಬೆಂಗಳೂರು | ಸದಸ್ಯರು |
| ೨. | ನಿರ್ದೇಶಕರು, ಪ್ರಾಚ್ಯವಸ್ತು ಮತ್ತು ವಸ್ತುಸಂಗ್ರಹಾಲಯ ನಿರ್ದೇಶನಾಲಯ, ಮೈಸೂರು | ಸದಸ್ಯರು |
| ೩. | ಡಾ. ಮಂಜುನಾಥ ಬೇವಿನಕಟ್ಟಿ, ಡೀನ್, ಸಮಾಜ ವಿಜ್ಞಾನಗಳ ನಿಕಾಯ, ಕ.ವಿ.ಹಂ. | ಸದಸ್ಯರು |

ಸಭೆಯ ಆರಂಭದಲ್ಲಿ ಮಾನ್ಯ ಕುಲಸಚಿವರು ಕಾರ್ಯಕಾರಿ ಸಮಿತಿ ಸದಸ್ಯರನ್ನು ಸಭೆಗೆ ಸ್ವಾಗತಿಸಿದರು. ನಂತರ ಮಂಡಿಸಲಾದ ಕಾರ್ಯಸೂಚಿಯನ್ನು ಕುರಿತು ಚರ್ಚಿಸಿ ಈ ಕೆಳಕಂಡ ನಿರ್ಣಯಗಳನ್ನು ಕೈಗೊಳ್ಳಲಾಯಿತು.

ದಿನಾಂಕ : ೨೦.೧೨.೨೦೧೬ರಂದು ನಡೆದ ಕಾರ್ಯಕಾರಿ ಸಮಿತಿಯ ೧೮೬ನೇ ಸಭೆಯ ನಡೆವಳಿಗಳ ಸ್ಥಿರೀಕರಣ ಹಾಗೂ ಅನುಮೋದನೆ ನೀಡುವ ಕುರಿತು.

ದಿನಾಂಕ : ೨೦.೧೨.೨೦೧೬ರಂದು ನಡೆದ ಕಾರ್ಯಕಾರಿ ಸಮಿತಿಯ ೧೮೬ ಸಭೆಯ ನಡೆವಳಿಗಳ ಸ್ಥಿರೀಕರಣಕ್ಕೆ ಅನುಮೋದನೆ ನೀಡಿತು.

ದಿನಾಂಕ : ೨೦.೧೨.೨೦೧೬ರಂದು ನಡೆದ ಕಾರ್ಯಕಾರಿ ಸಮಿತಿಯ ೧೮೬ ಸಭೆಯ ನಡೆವಳಿಗಳ ಅನುಪಾಲನಾ ವರದಿಗೆ ಅನುಮೋದನೆ ನೀಡುವ ಕುರಿತು.

ದಿನಾಂಕ : ೨೦.೧೨.೨೦೧೬ರಂದು ನಡೆದ ಕಾರ್ಯಕಾರಿ ಸಮಿತಿಯ ೧೮೬ ಸಭೆಯ ನಡೆವಳಿಗಳ ಅನುಪಾಲನಾ ವರದಿಗೆ ಅನುಮೋದನೆ ನೀಡಿತು.

೧೮೭.೦೧ : ದಿನಾಂಕ ೨೧.೦೪.೨೦೧೭ರಂದು ನಡೆಯಲಿರುವ ೨೫ನೇ ನುಡಿಹಬ್ಬ ಘಟಿಕೋತ್ಸವದಲ್ಲಿ ಪಡೆಯುವ ಪದವಿಗಳಿಗೆ ಅನುಮೋದನೆ ಕೋರಿದೆ.

ನಿರ್ಣಯ : ದಿನಾಂಕ ೨೧.೦೪.೨೦೧೭ರಂದು ನಡೆಯಲಿರುವ ೨೫ನೇ ನುಡಿಹಬ್ಬ ಘಟಿಕೋತ್ಸವದಲ್ಲಿ ಪಡೆಯುವ ಪದವಿಗಳಿಗೆ ಸಭೆಯು ಸರ್ವಾನುಮತದಿಂದ ಅನುಮೋದನೆ ನೀಡಿತು.

೧೮೭.೦೨ : ದಿನಾಂಕ ೨೧.೦೪.೨೦೧೭ ಮತ್ತು ೨೨.೦೪.೨೦೧೭ರಂದು ನಡೆಯಲಿರುವ ನುಡಿಹಬ್ಬದ ಘಟಿಕೋತ್ಸವ, ವಿಚಾರ ಸಂಕಿರಣ ಹಾಗೂ ನಮ್ಮ ಹಬ್ಬದ ಕಾರ್ಯಕ್ರಮಗಳ ಪ್ರಕ್ರಿಯೆಗಳಿಗೆ ಹಾಗೂ ಇವುಗಳ ಖರ್ಚುವೆಚ್ಚಗಳಿಗೆ ಅನುಮೋದನೆ ಕೋರಿದೆ.

ನಿರ್ಣಯ : ದಿನಾಂಕ ೨೧.೦೪.೨೦೧೭ ಮತ್ತು ೨೨.೦೪.೨೦೧೭ರಂದು ನಡೆಯಲಿರುವ ನುಡಿಹಬ್ಬದ ಘಟಿಕೋತ್ಸವ, ವಿಚಾರ ಸಂಕಿರಣ ಹಾಗೂ ನಮ್ಮ ಹಬ್ಬದ ಕಾರ್ಯಕ್ರಮಗಳ ಪ್ರಕ್ರಿಯೆಗಳಿಗೆ ಹಾಗೂ ಇವುಗಳ ಖರ್ಚುವೆಚ್ಚಗಳಿಗೆ ಸಭೆಯು ಅನುಮೋದನೆ ನೀಡಿತು.

೧೮೭.೦೩ : ಕನ್ನಡ ವಿಶ್ವವಿದ್ಯಾಲಯದಲ್ಲಿ ಮಾನ್ಯ ಕುಲಪತಿಯವರಿಗೆ ರೂ. ೨೫೦೦೦/- (ಇಪ್ಪತ್ತೈದು ಸಾವಿರ ಮಾತ್ರ) ಮಂಜೂರು ಮಾಡಲು ಅವಕಾಶವಿದ್ದು, ರೂ. ೨೫೦೦೦/- (ಇಪ್ಪತ್ತೈದು ಸಾವಿರ ಮಾತ್ರ) ದಿಂದ ರೂ. ೨,೦೦,೦೦೦/- (ಎರಡು ಲಕ್ಷ)ಕ್ಕೆ ಹೆಚ್ಚು ಮಾಡುವ ಬಗ್ಗೆ.

ನಿರ್ಣಯ : ಕನ್ನಡ ವಿಶ್ವವಿದ್ಯಾಲಯದಲ್ಲಿ ಮಾನ್ಯ ಕುಲಪತಿಯವರಿಗೆ ರೂ. ೨೫,೦೦೦/- (ಇಪ್ಪತ್ತೈದು ಸಾವಿರ ಮಾತ್ರ) ಮಂಜೂರು ಮಾಡಲು ಅವಕಾಶವಿದ್ದುದನ್ನು ಸಭೆಯು ಪರಿಶೀಲಿಸಿ ವಿಶ್ವವಿದ್ಯಾಲಯದ ನಿಯಮಾನುಸಾರ ರೂ. ೨೫,೦೦೦/- ದಿಂದ ರೂ. ೫,೦೦,೦೦೦/- (ಐದು ಲಕ್ಷ)ಕ್ಕೆ ಹೆಚ್ಚಿಸಿತು ಹಾಗೂ ಪಾವತಿಗೆ ಮಂಜೂರಾತಿಯ ಪೂರ್ಣ ಅಧಿಕಾರವನ್ನು ಮಾನ್ಯ ಕುಲಪತಿಯವರಿಗೆ ಸರ್ವಾನುಮತದಿಂದ ಅನುಮೋದನೆ ನೀಡಿತು.

೧೮೭.೦೪ : ಕನ್ನಡ ಭಾಷಾಧ್ಯಯನ ವಿಭಾಗದ ಪ್ರಾಧ್ಯಾಪಕರಾದ ಡಾ. ಸಾಂಬಮೂರ್ತಿ ಇವರು ೨೦೧೭-೧೮ನೇ ಸಾಲಿನಲ್ಲಿ ಸೆಬಾಟಿಕಲ್ ರಜೆ ಕೋರಿದ್ದಾರೆ. ದಿನಾಂಕ ೦೧.೦೪.೨೦೧೭ರಿಂದ ಅನ್ವಯವಾಗುವಂತೆ ರಜೆ ಕೋರಿದ್ದು, ಯೋಜನೆಯ ಪ್ರಸ್ತಾವನೆಯನ್ನು ಸಲ್ಲಿಸಿದ್ದಾರೆ.

ನಿರ್ಣಯ : ಕನ್ನಡ ಭಾಷಾಧ್ಯಯನ ವಿಭಾಗದ ಪ್ರಾಧ್ಯಾಪಕರಾದ ಡಾ. ಸಾಂಬಮೂರ್ತಿ ಇವರಿಗೆ ಮೇ ೧, ೨೦೧೭ರಿಂದ ನಿಯಮಾನುಸಾರ ಸೆಬಾಟಿಕಲ್ ರಜೆಯನ್ನು ಮಂಜೂರುಮಾಡಲು ಸಭೆ ಅನುಮೋದನೆ ನೀಡಿತು.

೧೮೭.೦೫ : ಅಧ್ಯಕ್ಷರು, ಕನ್ನಡ ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು ಇವರಿಗೆ ಹೊರರಾಜ್ಯಗಳ ಏಳು ವಿಶ್ವವಿದ್ಯಾಲಯಗಳು ಹಾಗೂ ಕನ್ನಡ ಸ್ನಾತಕೋತ್ತರ ಅಧ್ಯಯನ ಕೇಂದ್ರಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳ ಅನುಕೂಲಕ್ಕೆ ಎಲ್ಲ ಶೀರ್ಷಿಕೆಗಳ ೧೪ಸೆಟ್ ಪುಸ್ತಕಗಳನ್ನು ವಿಶ್ವವಿದ್ಯಾಲಯದ ಪ್ರಸಾರಾಂಗದಿಂದ "ಕೊಡುಗೆ" ರೂಪದಲ್ಲಿ ನೀಡಿದ್ದು, ಘಟನೋತ್ತರ ಅನುಮೋದನೆ ಕೋರಿದೆ.

ನಿರ್ಣಯ : ಅಧ್ಯಕ್ಷರು, ಕನ್ನಡ ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು ಇವರಿಗೆ ಹೊರರಾಜ್ಯಗಳ ಏಳು ವಿಶ್ವವಿದ್ಯಾಲಯಗಳು ಹಾಗೂ ಕನ್ನಡ ಸ್ನಾತಕೋತ್ತರ ಅಧ್ಯಯನ ಕೇಂದ್ರಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳ ಅನುಕೂಲಕ್ಕೆ ಎಲ್ಲ ಶೀರ್ಷಿಕೆಗಳ ೧೪ಸೆಟ್ ಪುಸ್ತಕಗಳನ್ನು ವಿಶ್ವವಿದ್ಯಾಲಯದ ಪ್ರಸಾರಾಂಗದಿಂದ "ಕೊಡುಗೆ" ರೂಪದಲ್ಲಿ ನೀಡಿದಕ್ಕೆ ಸಭೆ ಅನುಮೋದನೆ ನೀಡಿತು.

೧೮೭.೦೬ : ದಿನಾಂಕ ೨೮.೦೩.೨೦೧೭ರಂದು ನಡೆದ ತ್ರೈಮಾಸಿಕ ಹಣಕಾಸು ಸಮಿತಿ ಸಭೆಯ ನಡವಳಿಗಳಿಗೆ ಅನುಮೋದನೆ ಕೋರಿದೆ.

ನಿರ್ಣಯ : ದಿನಾಂಕ ೨೮.೦೩.೨೦೧೭ರಂದು ನಡೆದ ತ್ರೈಮಾಸಿಕ ಹಣಕಾಸು ಸಮಿತಿ ಸಭೆಯ ನಡವಳಿಗಳಿಗೆ ಸಭೆ ಅನುಮೋದನೆ ನೀಡಿತು.

೧೮೭.೦೭ : ಭರತವಾಣಿ ಪ್ರಾಜೆಕ್ಟ್, ಸಿ.ಐ.ಐ.ಎಲ್ ಮೈಸೂರು ಇದರ ಯೋಜನೆಗೆ ವಿಶ್ವವಿದ್ಯಾಲಯದಿಂದ ಸಮ್ಮತಿಸಿ ಕರಾರು ಸಹಿ ಮಾಡಲು ಅನುಮೋದನೆ ಕೋರಿದೆ.

ನಿರ್ಣಯ : ಕರಾರು ಸಹಿಮಾಡಿ ಕ್ರಮವಹಿಸಲು ಸಭೆ ಅನುಮೋದನೆ ನೀಡಿತು.

೧೮೭.೦೮ : ತಾಂತ್ರಿಕ ವಿಭಾಗದ ಪ್ರಸ್ತಾವನೆಗಳಿಗೆ ಅನುಮೋದನೆ ಕೋರಿದೆ.

ನಿರ್ಣಯ : ತಾಂತ್ರಿಕ ವಿಭಾಗದ ಪ್ರಸ್ತಾವನೆಗಳನ್ನು ಪರಿಶೀಲಿಸಿದ ಸಭೆಯು ನಿಯಮಾನುಸಾರ ಪರಿಶೀಲಿಸಿ ಕ್ರಮವಹಿಸಲು ಅನುಮೋದನೆ ನೀಡಿತು.

**ಅಧ್ಯಕ್ಷರ ಅಪ್ಪಣೆ ಮೇರೆಗೆ ಹೆಚ್ಚುವರಿ ವಿಷಯಗಳ ನಿರ್ಣಯಗಳು**

೧೮೭.೦೯ : ಕನ್ನಡ ವಿಶ್ವವಿದ್ಯಾಲಯಕ್ಕೆ ೨೦೧೭-೧೮ನೇ ಶೈಕ್ಷಣಿಕ ವರ್ಷದಿಂದ ನಿಯೋಜಿಸಲಾಗಿರುವ ಶೈಕ್ಷಣಿಕ ಸಂಪನ್ಮೂಲ ವ್ಯಕ್ತಿಗಳ ಕುರಿತು.

ಟಿಪ್ಪಣಿ : ಕನ್ನಡ ವಿಶ್ವವಿದ್ಯಾಲಯದ ವಿದ್ಯಾರಣ್ಯ ಆವರಣ ಮತ್ತು ವಿಸ್ತರಣಾ ಕೇಂದ್ರಗಳಲ್ಲಿ ಶೈಕ್ಷಣಿಕ, ಅಧ್ಯಯನ, ಸಂಶೋಧನಾ ಚಟುವಟಿಕೆಗಳನ್ನು ಯೋಜಿತ ರೀತಿಯಲ್ಲಿ ಸಮಗ್ರವಾಗಿ ನಡೆಸಲು ಅಧ್ಯಾಪಕರ ಕೊರತೆಯಿದೆ. ಈ ಹಿನ್ನೆಲೆಯಲ್ಲಿ ಶೈಕ್ಷಣಿಕ ಅರ್ಹತೆಯಿರುವ ಕರ್ನಾಟಕದ ಸರ್ಕಾರಿ ಮತ್ತು ಅನುದಾನಿತ ಪದವಿ ಕಾಲೇಜುಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ೧೩೫ ಜನ ಅಧ್ಯಾಪಕರನ್ನು ಕನ್ನಡ ವಿಶ್ವವಿದ್ಯಾಲಯದ ಶೈಕ್ಷಣಿಕ ಸಂಪನ್ಮೂಲ ವ್ಯಕ್ತಿಗಳೆಂದು ಗುರುತಿಸಿದೆ. ರಾಜ್ಯವ್ಯಾಪ್ತಿ

ಕಾರ್ಯ ಚಟುವಟಿಕೆಗಳನ್ನು ಹೊಂದಿರುವ ಕನ್ನಡ ವಿಶ್ವವಿದ್ಯಾಲಯ ನಾಡಿನಾದ್ಯಂತ ಇರುವ ವಿದ್ವಾಂಸರನ್ನು ಕನ್ನಡ ವಿಶ್ವವಿದ್ಯಾಲಯದ ಶೈಕ್ಷಣಿಕ, ಸಂಶೋಧನೆಯ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುವ ಮತ್ತು ಅವರ ತಿಳಿವಳಿಕೆಯನ್ನು ನಾಡಿಗೆ ಉಪಯುಕ್ತಗೊಳಿಸುವ ಉದ್ದೇಶ ಹೊಂದಿದೆ. ಈ ಹಿನ್ನೆಲೆಯಲ್ಲಿ ವಿಷಯಾಧಾರಿತವಾಗಿ ಈ ಅಧ್ಯಾಪಕರು ಕನ್ನಡ ವಿಶ್ವವಿದ್ಯಾಲಯದ ಶೈಕ್ಷಣಿಕ ಮತ್ತ ಸಂಶೋಧನಾ ಚಟುವಟಿಕೆಗಳಲ್ಲಿ ಮತ್ತು ವಿದ್ಯಾರ್ಥಿಗಳಿಗೆ ನಿಯಮಾನುಸಾರ ಎಂ.ಫಿಲ್., ಪಿಎಚ್.ಡಿ. ಅಧ್ಯಯನಗಳ ಮಾರ್ಗದರ್ಶಕರನ್ನಾಗಿ ನಿಯೋಜಿಸಲು ಕಾರ್ಯಕಾರಿ ಸಮಿತಿಯ ಅನುಮೋದನೆ ಕೋರಿದೆ .

ನಿರ್ಣಯ : ಸಭೆಯು ಪರಿಶೀಲಿಸಿ ಸರ್ವಾನುಮತದಿಂದ ಅನುಮೋದನೆ ನೀಡಿತು.

೧೮೭.೧೦ : ಕನ್ನಡ ವಿಶ್ವವಿದ್ಯಾಲಯದ ಆವರಣದಲ್ಲಿ ಹಲವು ಕಾಮಗಾರಿಗಳು/ ಕಟ್ಟಡಗಳು ನಿರ್ಮಾಣವಾಗುತ್ತಿದ್ದು, ಇವುಗಳ ಗುಣಮಟ್ಟ ಕಾಯ್ದುಕೊಳ್ಳಲು ವಿಶ್ವದ್ಯಾಲಯದಲ್ಲಿ ಇಬ್ಬರು ಸಿವಿಲ್ ಅಭಿಯಂತರರು ಇದ್ದು, ಒಬ್ಬರು ವಿಭಾಗದ ಮುಖ್ಯಸ್ಥರಾಗಿರುತ್ತಾರೆ. ಇನ್ನೊಬ್ಬರು ಸಹಾಯಕ ಅಭಿಯಂತರರಾಗಿರುತ್ತಾರೆ. ಕಟ್ಟಡದ ಅಳತೆ ಅಂದಾಜು ವೆಚ್ಚ, ಗುಣಮಟ್ಟ ಇತ್ಯಾದಿಗಳನ್ನು ಸಮರ್ಪಕವಾಗಿ ನಿರ್ವಹಿಸುವ ಅವಶ್ಯಕವಿದ್ದು, ಒಬ್ಬ ನಿವೃತ್ತ ಸಿವಿಲ್ ಅಭಿಯಂತರರನ್ನು ತಾತ್ಕಾಲಿಕವಾಗಿ ನೇಮಿಸಿಕೊಳ್ಳಲು ಅನುಮೋದನೆ ಕೋರಿದೆ.

ನಿರ್ಣಯ : ನಿಗದಿತ ಸಮಯದಲ್ಲಿ ಅನುದಾನದ ಸರಿಯಾದ ಬಳಕೆ ಮತ್ತು ಕಾಮಗಾರಿಗಳನ್ನು ಪೂರೈಸಲು ಅನುವಾಗುವಂತೆ ತಾಂತ್ರಿಕ ವಿಭಾಗದ ನೆರವಿಗೆ ಒಬ್ಬ ನಿವೃತ್ತ ಸಿವಿಲ್ ಅಭಿಯಂತರರನ್ನು ಅರ್ಹತೆ ಅನುಭವಗಳನ್ನು ಪರಿಶೀಲಿಸಿ ಗೌರವ ಸಂಭಾವನೆ ಆಧಾರದ ಮೇಲೆ ನಿಯೋಜಿಸಿಕೊಳ್ಳಲು ಕುಲಪತಿಯವರಿಗೆ ಅಧಿಕಾರ ನೀಡಲಾಯಿತು. ಇವರ ಕೆಲಸ ಕಾರ್ಯಗಳ ದೃಢೀಕರಣವನ್ನು ತಾಂತ್ರಿಕ ವಿಭಾಗದ ಮುಖ್ಯಸ್ಥರಿಂದ ಮಾಡಿಸಲು ಸಭೆ ಸೂಚಿಸಿತು.

೧೮೭.೧೧ : ಚಿತ್ರಕಲಾ ವಿದ್ಯಾಲಯಗಳ ನಿರ್ವಹಣಾ ಕೇಂದ್ರದಿಂದ ಬಿವಿಎ ಪದವಿ ಹಾಗೂ ವಿಶೇಷ ಪರಿಣಿತಿ ಡಿಪ್ಲೊಮಾ ಕೋರ್ಸ್ ಪಡೆದ ಪದವಿಗಳಿಗೆ ಅನುಮೋದನೆ ಕೋರಿದೆ.

ನಿರ್ಣಯ : ಸಭೆಯು ಪರಿಶೀಲಿಸಿ ಸರ್ವಾನುಮತದಿಂದ ಅನುಮೋದನೆ ನೀಡಿತು.

೧೮೭.೧೨ : ಬುಡಕಟ್ಟು ಅಧ್ಯಯನ ವಿಭಾಗದ ಡಾ. ಎ.ಎಸ್. ಪ್ರಭಾಕರ, ಪ್ರಾಧ್ಯಾಪಕರು ಇವರ ಡಿಜಿಟಲ್ ಹ್ಯೂಮಾನಿಟೀಸ್ ಕೇಂದ್ರದ ಪ್ರಸ್ತಾವನೆಗೆ ಅನುಮೋದನೆ ಕೋರಿದೆ.

ನಿರ್ಣಯ : ಬುಡಕಟ್ಟು ಅಧ್ಯಯನ ವಿಭಾಗದ ಡಾ. ಎ.ಎಸ್. ಪ್ರಭಾಕರ, ಪ್ರಾಧ್ಯಾಪಕರು ಇವರ ಡಿಜಿಟಲ್ ಹ್ಯೂಮಾನಿಟೀಸ್ ಕೇಂದ್ರದ ಪ್ರಸ್ತಾವನೆಗೆ ಸಭೆಯು ಅನುಮೋದನೆ ನೀಡಿತು.

೧೮೭.೧೩ : ೧. ಕನ್ನಡ ವಿಶ್ವವಿದ್ಯಾಲಯದ ೩೭೧ಜೆ ಪರಿಷ್ಕೃತ ಅಧಿಸೂಚನೆಗೆ ಅನುಮೋದನೆ ಕೋರಿ.

೩೭೧ಜೆ ಪರಿಷ್ಕೃತ ಅಧಿಸೂಚನೆಯು ದಿನಾಂಕ ೨೨.೦೩.೨೦೧೭ರಂದು ಸರ್ಕಾರದಿಂದ ಅನುಮೋದನೆಗೊಂಡ ನಂತರ ಆಡಳಿತಾತ್ಮಕ ಅನುಮೋದನೆಯೊಂದಿಗೆ ದಿನಾಂಕ ೩೧.೦೩.೨೦೧೭ ರಂದು ವಿಶ್ವವಿದ್ಯಾಲಯದ ಅಂತರ್‌ಜಾಲದಲ್ಲಿ ಪ್ರಕಟಿಸಲಾಗಿದೆ.

೨. ೩೭೧ಜೆ ಅಧಿಸೂಚನೆಯನ್ನು ಅನುಷ್ಠಾನಗೊಳಿಸಲು ಉಪಸಮಿತಿ ರಚಿಸುವ ಕುರಿತು.
ಅಧಿಸೂಚನೆಯನ್ವಯ ಗುರುತಿಸಲಾದ ಖಾಲಿ ಇರುವ ಹುದ್ದೆಗಳ ಭರ್ತಿ/ಮುಂಬಡ್ತಿಗೆ ಕ್ರಮವಹಿಸಲು ಸೂಕ್ತ ನಿರ್ದೇಶನ ಕೋರಿದೆ.

೩. ಖಾಲಿ ಹುದ್ದೆಗಳ ಪ್ರವರ್ಗವಾರು ಮೀಸಲಾತಿಯನ್ನು ಗುರುತಿಸಲು ಸೂಕ್ತ ನಿರ್ದೇಶನ ಕೋರಿದೆ.

ನಿರ್ಣಯ : ಮೇಲಿನ ವಿವರಗಳ್ನು ಸಭೆಯು ಪರಿಶೀಲಿಸಿ ಈ ಕುರಿತಂತೆ ಸರ್ಕಾರದ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ, ಸಮಾಜ ಕಲ್ಯಾಣ ಇಲಾಖೆ ಹಾಗೂ ನೇಮಕಾತಿಗಳಲ್ಲಿ ಅನುಭವವಿರುವ ನಿವೃತ್ತ ಅಧಿಕಾರಿ, ಪರಿಣಿತರನ್ನು ಒಳಗೊಂಡ ಸಮಿತಿಯನ್ನು ರಚಿಸಲು ಕುಲಪತಿಯವರಿಗೆ ಕ್ರಮಕೈಗೊಳ್ಳುವಂತೆ ಸಭೆ ಸೂಚಿಸಿತು.

೧೮೭.೧೪ : ೨೦೧೫ ಜನವರಿಯಲ್ಲಿ ನೀಡಿದ ಮುಂಬಡ್ತಿಗಳ ಕುರಿತು

ಟಿಪ್ಪಣಿ : ದಿನಾಂಕ ೨೨.೦೧.೨೦೧೫ರಂದು ಬೋಧಕೇತರ ಹುದ್ದೆಗಳ ಮುಂಬಡ್ತಿಯ ಪ್ರಕ್ರಿಯೆಯು ಸರ್ಕಾರದಿಂದ ಅನುಮೋದನೆ ಆಗಿರುವುದಿಲ್ಲ. ಮತ್ತು ಅನೇಕ ನೌಕರರು ಮನವಿಗಳನ್ನು ಸಲ್ಲಿಸಿ ತಮಗೆ ಅನ್ಯಾಯವಾಗಿರುವುದಾಗಿ ಸರಿಪಡಿಸಲು

ಕೋರಿಕೆ ಸಲ್ಲಿಸಿರುತ್ತಾರೆ. ಹಾಗೂ ೨೦೧೩ರಲ್ಲಿ ೩೭೧ಜೆ ಆದೇಶ ಹೊರಟ ನಂತರ ನೀಡಲಾದ ಮುಂಬಡ್ತಿಗಳಲ್ಲಿ ೩೭೧ಜೆ ನಿಯಮ ಅಳವಡಿಕೆ ಆಗದಿರುವ ಕಾರಣ ಪರಿಶೀಲಿಸಿ ಸರಿಪಡಿಸುವ ಬಗೆಗೆ ಕಾರ್ಯಕಾರಿ ಸಮಿತಿಯ ನಿರ್ದೇಶನ ಕೋರಿದೆ.

ನಿರ್ಣಯ : ಮೇಲಿನ ವಿವರಗಳನ್ನು ಸಭೆಯು ಪರಿಶೀಲಿಸಿ ಈ ಕುರಿತಂತೆ ಸರ್ಕಾರದ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ, ಸಮಾಜ ಕಲ್ಯಾಣ ಇಲಾಖೆ ಹಾಗೂ ನೇಮಕಾತಿಗಳಲ್ಲಿ ಅನುಭವ ವಿರುವ ನಿವೃತ್ತ ಅಧಿಕಾರಿ ಪರಿಣಿತರನ್ನು ಒಳಗೊಂಡ ಸಮಿತಿಯನ್ನು ರಚಿಸಿ ಕ್ರಮಕೈಗೊಳ್ಳಲು ಕುಲಪತಿಯವರಿಗೆ ಅಧಿಕಾರ ನೀಡಲಾಯಿತು.

೧೮೭.೧೫ : ವಿಶ್ವವಿದ್ಯಾಲಯದ ಆವರಣದಲ್ಲಿ ವಿವಿಧ ಜಾತಿಯ ಗಿಡಮರಗಳು, ವಿದ್ಯಾರ್ಥಿಗಳ ಹಾಸ್ಟೆಲ್‌ಗಳು ಹಾಗೂ ವಿಶ್ವವಿದ್ಯಾಲಯದ ಸಾಮಗ್ರಿಗಳನ್ನು ಒಂದು ಕಟ್ಟಡದಿಂದ ಇನ್ನೊಂದು ಕಟ್ಟಡಕ್ಕೆ ಸಾಗಿಸಲು ಟ್ರ್ಯಾಕ್ಟರ್, ನೀರಿನ ಟ್ಯಾಂಕ್ ಹಾಗೂ ಲಗೇಜ್ ಟ್ರ್ಯಾಲಿಯು ತಾಂತ್ರಿಕ ವಿಭಾಗಕ್ಕೆ ಅವಶ್ಯವಾಗಿದ್ದು, ಖರೀದಿಗೆ ಅನುಮೋದನೆ ಕೋರಿದೆ.

ನಿರ್ಣಯ : ಈ ಪ್ರಸ್ತಾವನೆಯನ್ನು ಸಭೆಯು ಪರಿಶೀಲಿಸಿ ಟ್ರ್ಯಾಕ್ಟರ್, ನೀರಿನ ಟ್ಯಾಂಕ್ ಮತ್ತು ಟ್ರ್ಯಾಲಿಯನ್ನು ಖರೀದಿಸಲು ಅನುಮೋದನೆಯನ್ನು ನೀಡಿತು.

ಹಾಗೂ ಮಾನ್ಯ ಕುಲಪತಿಗಳ ಬಳಕೆಯಲ್ಲಿರುವ ವಾಹನವು ಪದೇ ಪದೇ ದುರಸ್ತಿಯಾಗುತ್ತಿರುವ ಹಿನ್ನೆಲೆಯಲ್ಲಿ ಮಾನ್ಯ ಕುಲಪತಿಗಳಿಗೆ ಒಂದು ಹೊಸ ವಾಹನವನ್ನು ಖರೀದಿಸಲು ಸಭೆಯು ಸರ್ವಾನುಮತದಿಂದ ಅನುಮೋದನೆ ನೀಡಿತು.

ಕನ್ನಡ ವಿಶ್ವವಿದ್ಯಾಲಯದ ಇತರೆ ಅಧಿಕಾರಿಗಳ ಕಚೇರಿ ಓಡಾಟದ ಬಳಕೆಗಾಗಿ ಸರ್ಕಾರದ ವಿವಿಧ ಇಲಾಖೆಗಳಲ್ಲಿ ಖಾಲಿ ಇರುವ ಹಳೇಯ ಸುಸ್ಥಿತಿಯಲ್ಲಿರುವ ವಾಹನವನ್ನು ಸಂಬಂಧಿಸಿದ ಸರ್ಕಾರದ ಇಲಾಖೆಯಿಂದ ಪಡೆಯಲು ಕ್ರಮವಹಿಸುವಂತೆ ಸಭೆ ಸೂಚಿಸಿತು.

೧೮೭.೧೬ : ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ವಿಶೇಷ ಘಟಕದ ವತಿಯಿಂದ ವಿದ್ಯಾರ್ಥಿಗಳಿಗೆ ಮತ್ತು ಬೋಧಕೇತರ ಸಿಬ್ಬಂದಿಗಳಿಗೆ ದಿನಾಂಕ ೨೭.೦೩.೨೦೧೭ರಿಂದ ೩೦.೦೩.೨೦೧೭ರವರೆಗೆ ಕಿಯೋನಿಕ್ಸ್ ಸಂಸ್ಥೆ, ಹೊಸಪೇಟೆ ಇವರಿಂದ ತರಬೇತಿಯನ್ನು ನೀಡಲಾಗಿತ್ತು. ಸದರಿ ಕಾರ್ಯಕ್ರಮಕ್ಕೆ ಅನುಮೋದನೆ ಕೋರಿದೆ.

ನಿರ್ಣಯ : ಸಭೆ ಅನುಮೋದನೆ ನೀಡಿತು.

೧೮೭.೧೭ : ಬಂಜಾರ- ಕನ್ನಡ ಭಾಷಾ ಸಾಮಾನ್ಯ ನಿಘಂಟು ಯೋಜನೆಯ ನಿರ್ವಹಣೆಗೆ ತಾತ್ಕಾಲಿಕವಾಗಿ ಹುದ್ದೆಗಳನ್ನು ಆರು ತಿಂಗಳ ಅವಧಿಗೆ ನೇಮಕ ಮಾಡಿಕೊಳ್ಳಲು ಕಾರ್ಯಕಾರಿ ಸಮಿತಿ ಅನುಮೋದನೆ ಕೋರಿದೆ.

ನಿರ್ಣಯ : ಸಭೆ ಅನುಮೋದನೆ ನೀಡಿತು.

೧೮೭.೧೮ : ಪಿಚ್ಚಗುಂಟ್ಲು, ಹೆಳವ ಸಮುದಾಯದ ಕುಲಶಾಸ್ತ್ರೀಯ ಅಧ್ಯಯನ ಯೋಜನೆ ತಾತ್ಕಾಲಿಕ ಯೋಜನಾ ಸಹಾಯಕರ ನೇಮಕಾತಿ ಮಾಡಿಕೊಳ್ಳಲಾಗಿದೆ. ಸದರಿ ಪ್ರಕ್ರಿಯೆಗೆ ಕಾರ್ಯಕಾರಿ ಸಮಿತಿ ಅನುಮೋದನೆ ಕೋರಿದೆ.

ನಿರ್ಣಯ : ಸಭೆ ಅನುಮೋದನೆ ನೀಡಿತು.

೧೮೭.೧೯ : ದಿನಾಂಕ ೦೬.೦೩.೨೦೧೭ರಂದು ನಡೆದ ಐಕ್ಯೂಎಸಿಯ ಅನುಷ್ಠಾನ ಸಮಿತಿ ಸಭೆಯ ನಡೆವಳಿ ಮತ್ತು ನಿಯತಕಾಲಿಕೆಗಳ ಪಟ್ಟಿಯ ಅನುಮೋದನೆ ಕೋರಿದೆ.

ನಿರ್ಣಯ : ಸಭೆ ಅನುಮೋದನೆ ನೀಡಿತು.

೧೮೭.೨೦ : ಲೆಕ್ಕ ತಪಾಸಣೆ ವರದಿಯು ವಿಶ್ವವಿದ್ಯಾಲಯದ ಎಂಟು ಜನ ಅಧ್ಯಾಪಕರಿಗೆ ದಿನಾಂಕ ೧.೧.೧೯೯೬ರಿಂದಲೇ ನೀಡಿರುವ ವೇತನವನ್ನು ಕಡಿತಗೊಳಿಸಿ ವಿಶ್ವವಿದ್ಯಾಲಯದ ನಿಧಿಗೆ ಜಮಾ ಮಾಡಲು ಕ್ರಮವಹಿಸುವ ಕುರಿತು ನೀಡಿರುವ ವರದಿಗೆ, ಎಂಟು ಜನ ಅಧ್ಯಾಪಕರು ವೇತನ ಕಡಿತ ಮಾಡದಿರುವ ಬಗ್ಗೆ ಸಲ್ಲಿಸಿರುವ ಮನವಿ ಕುರಿತು.

ನಿರ್ಣಯ : ಈ ಕುರಿತಂತೆ ವಿವರವಾಗಿ ಚರ್ಚಿಸಿದ ಸಭೆಯು ಸದರಿ ಎಂಟು ಜನ ಅಧ್ಯಾಪಕರು ಕನ್ನಡ ವಿಶ್ವವಿದ್ಯಾಲಯದ ಅಧಿನಿಯಮದ ಅನುಸೂಚಿಯಲ್ಲಿರುವ ಮೊದಲನೇ ಪರಿನಿಯಮ ಉಪನ್ಯಾಸಕರ ನೇರ ನೇಮಕಾತಿ ಅನುಬಂಧ-(೧)ರ ರಿಂದ (೪)ರ ನಿಯಮಗಳು (ಪುಟ ಸಂಖ್ಯೆ-೨೯) ಮತ್ತು ವಿಶ್ವವಿದ್ಯಾಲಯದ ಪರಿನಿಯಮ ಅಧ್ಯಾಪಕ ವರ್ಗ ಅಧ್ಯಾಯದ ೪೭ನೇ ಅಂಶದಲ್ಲಿ ಉಲ್ಲೇಖಿತವಾಗಿರುವ ೮ ಪ್ರಕರಣ ೩೩, ೪೮ನೇ ಅಂಶಗಳ ಅನ್ವಯ (ಪುಟ ಸಂಖ್ಯೆ ೨೯-೩೧) ನೇಮಕಾತಿ ಮಾಡಲಾಗಿದೆ. ನಿಯೋಜಿಸಿದ ಹುದ್ದೆಯ ಸೇವೆಯನ್ನು ಸದರಿ ಅಧ್ಯಾಪಕರಿಂದ ವಿಶ್ವವಿದ್ಯಾಲಯ ಬಳಸಿಕೊಳ್ಳಲಾಗಿದೆ.

ಸದರಿ ಪ್ರಕರಣ ಕುರಿತು ದಿನಾಂಕ ೦೬.೧೨.೨೦೦೩ರಂದು ಶಿಕ್ಷಣ ಇಲಾಖೆ ಕುಲಸಚಿವರಿಗೆ ಪತ್ರ ಬರೆದು ಮೇಲೆ ಸೂಚಿಸಿದ ನಿಯಮಾನುಸಾರ ಎಂಟು ಅಧ್ಯಾಪಕರು ನೇಮಕಗೊಂಡಿರುವ ಹಿನ್ನೆಲೆಯಲ್ಲಿ ಈ ಪ್ರಕರಣವನ್ನು ಸರ್ಕಾರದ ಹಂತದಲ್ಲಿ ಮುಕ್ತಾಯಗೊಳಿಸಲಾಗಿದೆ ಎಂದು ತಿಳಿಸಿದ್ದಾರೆ. ಹಾಗಾಗಿ ವೇತನದಲ್ಲಿ ಕಡಿತ ಮತ್ತು ನೇಮಕಾತಿ ಆಕ್ಷೇಪಣೆ ಪ್ರಕರಣವನ್ನು ಸರಕಾರ ಕೈಬಿಟ್ಟಿರುವುದನ್ನು ಪರಿಗಣಿಸಿ ಈ ಪ್ರಕರಣವನ್ನು ಮುಕ್ತಾಯಗೊಳಿಸಲು ಶಿಫಾರಸ್ಸು ಮಾಡಿದೆ.

೧೮೭.೨೧ : ಶ್ರೀ ಪಿ.ಎಸ್. ಕರುಣಾಕರ ಇವರು ಬಡ್ತಿ ನೀಡುವ ಕುರಿತು ಸಲ್ಲಿಸಿರುವ ಮನವಿಯ ಕುರಿತು.

ನಿರ್ಣಯ : ಶ್ರೀ ಪಿ.ಎಸ್.ಕರುಣಾಕರ ಇವರ ಮನವಿಯನ್ನು ಚರ್ಚಿಸಲಾಯಿತು. ೧೮೪ನೇ ಕಾರ್ಯಕಾರಿ ಸಮಿತಿ ಸಭೆಯ ನಿರ್ಣಯದಲ್ಲಿ ಶ್ರೀ ಪಿ.ಎಸ್.ಕರುಣಾಕರ ಅವರಿಗೆ ನೀಡಲಾಗಿದ್ದ ಎರಡು ಮುಂಬಡ್ತಿಗಳನ್ನು ರದ್ದುಪಡಿಸಿ ಅನುಚರ ಹುದ್ದೆಗೆ ಮರಳಿಸಲಾಗಿರುವುದನ್ನು ಸಭೆಯು ಗಮನಿಸಿ ಈ ಕೆಳಕಂಡಂತೆ ನಿರ್ಣಯಿಸಲಾಯಿತು.

ಪ್ರಸ್ತುತ ಶ್ರೀ ಪಿ.ಎಸ್.ಕರುಣಾಕರ ಅವರು ತಮ್ಮ ನಡತೆಯನ್ನು ತಿದ್ದಿಕೊಂಡು ಮತ್ತು ಯಾವುದೇ ಆಡಳಿತಾತ್ಮಕ ಪರಿಣಾಮಗಳಿಗೆ ಸಂಬಂಧಿಸಿ ತಾನೇ ಹೊಣೆಗಾರನೆಂದು ಮುಚ್ಚಳಿಕೆ ಬರೆದುಕೊಟ್ಟಲ್ಲಿ ವಿಧಿಸಲಾಗಿದ್ದ ಶಿಕ್ಷೆಯ ಪ್ರಮಾಣವನ್ನು ಒಂದು ಹಂತಕ್ಕೆ ಸೀಮಿತಗೊಳಿಸಿ, ಷರತ್ತಿಗೊಳಪಡಿಸಿ ಕಿರಿಯ ಸಹಾಯಕ ಹುದ್ದೆಯಲ್ಲಿ ಮುಂದುವರಿಸಲು ಕ್ರಮವಹಿಸಲು ಕುಲಪತಿಯವರಿಗೆ ಅಧಿಕಾರ ನೀಡಿತು.

೧೮೭.೨೨ : ಚಿತ್ರಕಲಾ ವಿದ್ಯಾಲಯಗಳ ನಿರ್ವಹಣ ಕೇಂದ್ರವು ದಿನಾಂಕ ೦೫.೦೨.೨೦೧೯ರಂದು ನಡೆಸಿದ ಡಿಪ್ಲೋಮಾ ಕೋರ್ಸ್‌ನ ಪರೀಕ್ಷಾ ಮಂಡಳಿ ಸಭೆಯ ನಡೆವಳಿ ಸ್ಥಿರಿಕರಣ ಕೋರಿ.

ನಿರ್ಣಯ : ಚಿತ್ರಕಲಾ ವಿದ್ಯಾಲಯಗಳ ನಿರ್ವಹಣ ಕೇಂದ್ರವು ದಿನಾಂಕ ೦೫.೦೨.೨೦೧೯ರಂದು ನಡೆಸಿದ ಡಿಪ್ಲೋಮಾ ಕೋರ್ಸ್‌ನ ಪರೀಕ್ಷಾ ಮಂಡಳಿ ಸಭೆಯ ನಡೆವಳಿ ಸ್ಥಿರಿಕರಣಕ್ಕೆ ಸಭೆ ಅನುಮೋದನೆ ನೀಡಿತು.

೧೮೭.೨೩ : ಚಿತ್ರಕಲಾ ವಿದ್ಯಾಲಯಗಳ ನಿರ್ವಹಣ ಕೇಂದ್ರವು ದಿನಾಂಕ ೧೦.೦೪.೨೦೧೭ರಂದು ನಡೆಸಿದ ಬಿವಿಎ ಪದವಿ ಪರೀಕ್ಷಾ ಮಂಡಳಿ ಸಭೆಯ ನಡೆವಳಿ ಸ್ಥಿರಿಕರಣ ಕೋರಿ.

ನಿರ್ಣಯ : ಚಿತ್ರಕಲಾ ವಿದ್ಯಾಲಯಗಳ ನಿರ್ವಹಣ ಕೇಂದ್ರವು ದಿನಾಂಕ ೧೦.೦೪.೨೦೧೭ರಂದು ನಡೆಸಿದ ಬಿವಿಎ ಪದವಿ ಪರೀಕ್ಷಾ ಮಂಡಳಿ ಸಭೆಯ ನಡೆವಳಿ ಸ್ಥಿರಿಕರಣಕ್ಕೆ ಸಭೆ ಅನುಮೋದನೆ ನೀಡಿತು.

೧೮೭.೨೪ : ದಿನಾಂಕ ೧೫.೦೪.೨೦೧೭ರಂದು ನಡೆಸಿದ ಖರೀದಿ ಸಮಿತಿ ಸಭೆಯ ನಡೆವಳಿ ಸ್ಥಿರಿಕರಣ ಕೋರಿದೆ.

ನಿರ್ಣಯ : ದಿನಾಂಕ ೧೫.೦೪.೨೦೧೭ರಂದು ನಡೆಸಿದ ಖರೀದಿ ಸಮಿತಿ ಸಭೆಯ ನಡೆವಳಿ ಸ್ಥಿರಿಕರಣಕ್ಕೆ ಸಭೆ ಅನುಮೋದನೆ ನೀಡಿತು.

೧೮೭.೨೫ : ದೂರಶಿಕ್ಷಣ ನಿರ್ದೇಶನಾಲಯ ೨೦೧೫-೧೬ನೇ ಸಾಲಿನ ಸ್ನಾತಕೋತ್ತರ ಪದವಿ ಪೂರೈಸಿದ ವಿದ್ಯಾರ್ಥಿಗಳಿಗೆ ಪ್ರಮಾಣ ಪತ್ರ ನೀಡಲು ಅನುಮೋದನೆ ಕೋರಿದೆ.

ನಿರ್ಣಯ : ದೂರಶಿಕ್ಷಣ ನಿರ್ದೇಶನಾಲಯ ೨೦೧೫-೧೬ನೇ ಸಾಲಿನ ಸ್ನಾತಕೋತ್ತರ ಪದವಿ ಪೂರೈಸಿದ ವಿದ್ಯಾರ್ಥಿಗಳಿಗೆ ಪ್ರಮಾಣ ಪತ್ರ ನೀಡಲು ಸಭೆ ಅನುಮೋದನೆ ನೀಡಿತು.

೧೮೭.೨೬ : ಡಾ. ಮಂಜುನಾಥ ಬೇವಿನಕಟ್ಟಿ, ಡೀನ್, ಸಮಾಜ ವಿಜ್ಞಾನಗಳ ನಿಕಾಯ ಹಾಗೂ ಮುಖ್ಯಸ್ಥರು, ಜಾನಪದ ಅಧ್ಯಯನ ವಿಭಾಗ ಇವರು ೧೮೬ನೇ ಕಾರ್ಯಕಾರಿ ಸಮಿತಿ ಸಭೆಯ ನಡೆವಳಿಗಳನ್ನು ಸಭಾಧ್ಯಕ್ಷರ ಸಹಿ ಮಾಡುವ ಮೊದಲೇ ಹೊರಗಿನ ವ್ಯಕ್ತಿಗಳು, ಸಂಘ ಸಂಸ್ಥೆಗಳಿಗೆ ನೀಡಿರುವ ಬಗೆಗೆ ಆಡಳಿತಾತ್ಮಕ ನಿರ್ದೇಶನ ಕೋರಿದೆ.

ನಿರ್ಣಯ : ವಿಚಾರಣಾ ಸಮಿತಿ ರಚಿಸಿ ವರದಿ ಪಡೆದು ಕ್ರಮವಹಿಸಲು ಕುಲಪತಿಗಳಿಗೆ ಅಧಿಕಾರ ನೀಡಲಾಯಿತು.

೧೮೭.೨೭ : ಮುಖ್ಯಸ್ಥರು ಜಾನಪದ ಅಧ್ಯಯನ ವಿಭಾಗದ ಪ್ರಾಧ್ಯಾಪಕರು ಡಾ. ಎಂ.ಸಿ. ಗಣೇಶ್ ಇವರಿಗೆ ಬೆದರಿಕೆ ಹಾಕಿರುವ ಬಗೆಗೆ ಬಂದಿರುವ ದೂರಿಗೆ ಸಂಬಂಧಿಸಿ, ಕೈಗೊಂಡಿರುವ ಆಡಳಿತಾತ್ಮಕ ವಿವರಗಳನ್ನು ಸಭೆಯ ಗಮನಕ್ಕೆ ತರುತ್ತಾ ನಿರ್ದೇಶನ ಕೋರಿದೆ.

ನಿರ್ಣಯ : ವಿಚಾರಣಾ ಸಮಿತಿ ರಚಿಸಿ ವರದಿ ಪಡೆದು ಕ್ರಮವಹಿಸಲು ಕುಲಪತಿಗಳಿಗೆ ಅಧಿಕಾರ ನೀಡಲಾಯಿತು.

೧೮೭.೨೮ : ಶ್ರೀ ಸೋಮನಾಥ ಎಚ್.ಎಂ., ಅಧೀಕ್ಷಕರು ತೋಟಗಾರಿಕೆ ವಿಭಾಗ ಇವರ ೧.ಮುಂಬಡ್ತಿ ರದ್ದತಿಯ ಪ್ರಕರಣ,

೧೮೭.೨೮ : ಶ್ರೀ ಸೋಮನಾಥ ಎಚ್.ಎಂ., ಅಧೀಕ್ಷಕರು ತೋಟಗಾರಿಕೆ ವಿಭಾಗ ಇವರ ೧.ಮುಂಬಡ್ತಿ ರದ್ದತಿಯ ಪ್ರಕರಣ, ೨.ದುರ್ವತನೆ, ೩.ಪೊಲೀಸ್ ಉಪ ಅಧೀಕ್ಷಕರು, ಹಂಪಿ ಉಪ ವಿಭಾಗ, ಕಮಲಾಪುರ ಇವರು ಸೋಮನಾಥ ಎಚ್.ಎಂ. ಇವರ ಅರ್ಜಿ ಹಿನ್ನೆಲೆಯಲ್ಲಿ ಮಾಹಿತಿ ಕೋರಿರುವ ಬಗೆಗೆ.

ಟಿಪ್ಪಣಿ : ೨೦೧೫ ಜನವರಿ ಇಪ್ಪತ್ತೆರಡರಂದು ಕನ್ನಡ ವಿಶ್ವವಿದ್ಯಾಲಯದ ಆಡಳಿತ ಸಿಬ್ಬಂದಿಗಳಿಗೆ ನೀಡಿದ ಮುಂಬಡ್ತಿಗಳಲ್ಲಿ ಶ್ರೀ ಸೋಮನಾಥ ಎಚ್.ಎಂ. ಅಧೀಕ್ಷಕರು ತೋಟಗಾರಿಕೆ ವಿಭಾಗ ಇವರಿಗೆ ಕಿರಿಯ ಸಹಾಯಕ ಹುದ್ದೆಯಿಂದ ಅಧೀಕ್ಷಕ ಹುದ್ದೆಗೆ ಮುಂಬಡ್ತಿ ನೀಡಲಾಗಿದೆ.

ದಿನಾಂಕ೨೨.೦೧.೨೦೧೫ರಂದು ಕಿರಿಯ ಸಹಾಯಕ ಹುದ್ದೆಯಿಂದ ದಿ.೧೮.೯.೨೦೦೩ರಿಂದ ಪೂರ್ವಾನ್ವಯಗೊಳಿಸಿ ಸೂಪರ್ ನ್ಯೂಮರಿ ಹಿರಿಯ ಸಹಾಯಕ ಹುದ್ದೆಗೆ ಮತ್ತು ಅದೇ ದಿನ ಅಂದರೆ ೨೨.೦೧.೨೦೧೫ ರಿಂದಲೇ ಸೂಪರ್ ನ್ಯೂಮರಿ ಅಧೀಕ್ಷಕ ಹುದ್ದೆಗೆ ಮುಂಬಡ್ತಿ ನೀಡಲಾಗಿದೆ. ಅಂದರೇ ಒಂದೇ ದಿನ ಎರಡು ಮುಂಬಡ್ತಿಗಳನ್ನು ಪಡೆದಿರುತ್ತಾರೆ.

ಈ ಪ್ರಕರಣವನ್ನು ಉದಾಹರಿಸಿ ಶ್ರೀ ರಾಮಾನಾಯಕ್ ಹಿರಿಯ ಸಹಾಯಕ ಇವರು ತಮಗೂ ಹಾಗೆಯೇ ಮುಂಬಡ್ತಿ ನೀಡಬೇಕೆಂದು ಕೋರಿದ್ದರು. ಈ ಪ್ರಕರಣವನ್ನು ೧೮೫ನೇ ಕಾರ್ಯಕಾರಿ ಸಮಿತಿಗೆ ಮಂಡಿಸಲಾಗಿತ್ತು. ಈ ವಿಷಯ ಮತ್ತು ಇನ್ನಿತರ ವಿಷಯಗಳಾದ ಚುನಾವಣಾ ಅಕ್ರಮದಲ್ಲಿ ಪಾಲ್ಗೊಂಡು ಅಮಾನಾತ್ತು ಆಗಿದ್ದ ಅವಧಿ ಮತ್ತು ಲೆಕ್ಕ ಪರಿಶೋಧಕರ ಆಕ್ಷೇಪ ಪರಿಶೀಲಿಸಿ ಕಾರ್ಯಕಾರಿ ಸಮಿತಿಯು ಇವರ ಮುಂಬಡ್ತಿಗಳನ್ನು ರದ್ದುಗೊಳಿಸಿ ಜಿಲ್ಲಾಧಿಕಾರಿಗಳ ಆದೇಶ ಬಂದನಂತರ ವಷ್ಟೇ ಅರ್ಜಿಪಡೆದು ನಿಯಮಾನುಸಾರ ಮುಂಬಡ್ತಿ ನೀಡಬೇಕೆಂದು ಅಲ್ಲಿಯವರೆಗೆ ಈ ಹಿಂದೆ ನೀಡಿದ್ದ ಮುಂಬಡ್ತಿಗಳನ್ನು ರದ್ದುಪಡಿಸಿ ಕಿರಿಯ ಸಹಾಯಕ ಹುದ್ದೆಯಲ್ಲಿ ಕರ್ತವ್ಯ ನಿರ್ವಹಿಸಲು ಸೂಚಿಸಲಾಗಿತ್ತು. ಸದರಿ ಆದೇಶಕ್ಕೆ ಧಾರವಾಡದ ಉಚ್ಚ ನ್ಯಾಯಾಲಯದ ಪೀಠ ದಿನಾಂಕ ೧೮.೦೮.೨೦೧೬ರಲ್ಲಿ ಆದೇಶ ನೀಡಿ ಮುಂದಿನ ಆದೇಶದವರೆಗೆ ಯಾವುದೇ ಕ್ರಮಕೈಗೊಳ್ಳದಿರಲು ಸೂಚನೆ ನೀಡಿತ್ತು.

ಪ್ರಸ್ತುತ ೧೩.೦೩.೨೦೧೭ರಂದು ಸೋಮನಾಥ ಅವರು ದಾಖಲಿಸಿದ ಪ್ರಕರಣವನ್ನು ವಿಲೇಮಾಡಿ ಸದರಿಯವರ ವಿರುದ್ಧ ನಿಯಮಾನುಸಾರ ಕಾನೂನಿನ ರೀತ್ಯ ಶ್ರೀ ಸೋಮನಾಥ ಎಚ್.ಎಂ. ಅವರಿಗೆ ವಿವರಣೆ ನೀಡಲು ಅವಕಾಶನೀಡಿ ಕ್ರಮ ಜರುಗಿಸಲು ಆದೇಶ ನೀಡಿದೆ. ಈ ಹಿನ್ನೆಲೆಯಲ್ಲಿ ಮುಂದಿನ ಕ್ರಮಕ್ಕೆ ಕಾರ್ಯಕಾರಿ ಸಮಿತಿಯ ನಿರ್ದೇಶನ ಕೋರಿದೆ.

ಶ್ರೀ ಸೋಮನಾಥ ಎಚ್.ಎಂ. ಇವರು ಕನ್ನಡ ವಿಶ್ವವಿದ್ಯಾಲಯದ ಮೇಲಾಧಿಕಾರಿಗಳ ವಿರುದ್ಧ ಸುಳ್ಳು ಆರೋಪಗಳನ್ನು ಮಾಡುತ್ತಾ ತಮಗೆ ನಿಯೋಜಿಸಿಲ್ಲದ ಕೆಲಸಕಾರ್ಯಗಳಲ್ಲಿ ತೊಡಗಿ ವಿಶ್ವವಿದ್ಯಾಲಯದ ಘನತೆಗೆ ಕುಂದುಬರುವಂತೆ ನಡೆದುಕೊಂಡಿದ್ದಾರೆ. ಅನಧಿಕೃತ ಗೈರುಹಾಜರಾಗಿ ನಂತರ ವೈದ್ಯಕೀಯ ರಜೆಯ ಪ್ರಮಾಣ ಪತ್ರ ಸಲ್ಲಿಸಿ ರಜೆ ಕೋರಿದ್ದಾರೆ. ಈ ಅವಧಿಯಲ್ಲಿ ಇವರು ಪ್ರಕಣರವೊಂದರಲ್ಲಿ ತಲೆಮರೆಸಿಕೊಂಡಿದ್ದರೆಂದು ಪೊಲೀಸ್ ಇಲಾಖೆಯ ದಾಖಲೆಗಳಲ್ಲಿ ದಾಖಲಾಗಿದೆ. ಮತ್ತು ದಿನಾಂಕ ೨೩.೦೪.೨೦೧೬ರಂದು ಕಚೇರಿಗೆ ಹಾಜರಾಗಿರುವುದಾಗಿ ತಿಳಿಸಿ ವೇತನಕ್ಕಾಗಿ ಆಡಳಿತಕ್ಕೆ ಮನವಿ ಸಲ್ಲಿಸಿದ್ದಾರೆ. ಪೊಲೀಸ್ ದಾಖಲೆಗಳು ತಿಳಿಸಿರುವಂತೆ ಇವರನ್ನು ಬಂಧಿಸಿ ಆದಿನ ಪೊಲೀಸರು ಜಾಮೀನಿನ ಮೇಲೆ ಬಿಡುಗಡೆ ಮಾಡಿದ್ದಾರೆ. ಆದರೆ ಅವರು ಬೆಳಿಗ್ಗೆ ಬಂದು ದೌರ್ಜನ್ಯದಿಂದ ಹಾಜರಿಗೆ ಸಹಿ ಹಾಕಿದ್ದಾರೆ ಈ ವಿಷಯವನ್ನು ಮರೆಮಾಚಿ ೨೩.೪.೨೦೧೬ ವೇತನ ನೀಡುವಂತೆ ಆಗ್ರಹಿಸುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ ಇವರ ದುರ್ನಡತೆಗಳಿಗೆ ಸಂಬಂಧಿಸಿ ಅನೇಕ ಬಾರಿ ವಿವರಣೆ ನೀಡಲು ಸೂಚಿಸಿದ್ದರೂ ಸಮರ್ಪಕವಾಗಿ ಉತ್ತರ ನೀಡಿರುವುದಿಲ್ಲ. ಹಾಗೂ ವಿಶ್ವವಿದ್ಯಾಲಯದ ಕುಲಪತಿಗಳ ವಿರುದ್ಧ ವಿಶ್ವವಿದ್ಯಾಲಯದ ಅನುಮತಿ ಪಡೆಯದೇ ಪೊಲೀಸರಲ್ಲಿ ಅರ್ಜಿ ಸಲ್ಲಿಸಿದ್ದು, ದಿನಾಂಕ.೦೪.೦೪೨೦೧೭ ರಂದು ಪೊಲೀಸ್ ಉಪ ಅಧೀಕ್ಷಕರು ಹಂಪಿ ಇವರು ಮಾಹಿತಿ ಕೋರಿರುತ್ತಾರೆ. ಈ ಹಿನ್ನೆಲೆಯಲ್ಲಿ ಸದರಿಯವರ ದುರ್ವರ್ತನೆಯ ಬಗೆಗೆ ಕ್ರಮವಹಿಸಲು ನಿರ್ದೇಶನ ಕೋರಿದೆ.

ನಿರ್ಣಯ : ನಿವೃತ್ತ ನ್ಯಾಯಾಧೀಶರೊಬ್ಬರ ನೇತೃತ್ವದಲ್ಲಿ ಸಮಿತಿ ರಚಿಸಿ ವರದಿ ಪಡೆದು ಕ್ರಮವಹಿಸಲು ಸಭೆ ಸೂಚಿಸಿತು. ನ್ಯಾಯಾಧೀಶರನ್ನು ಆಯ್ಕೆ ಮಾಡಲು ಕುಲಪತಿಗಳಿಗೆ ಅಧಿಕಾರ ನೀಡಲಾಯಿತು.

೧೮೭.೨೯ : ಕನ್ನಡ ವಿಶ್ವವಿದ್ಯಾಲಯದ ಆವರಣದಲ್ಲಿ ಸೋಲಾರ್ ಪವರ್ ಪ್ರಾಜೆಕ್ಟ್ ನಿರ್ಮಾಣದ ಪ್ರಸ್ತಾವನೆಯನ್ನು ಸಭೆಯು ಪರಿಶೀಲಿಸಿ ನಿಯಮಾನುಸಾರ ಕ್ರಮವಹಿಸಲು ಸಭೆ ಸೂಚಿಸಿತು.

೧೮೭.೩೦ : ಕನ್ನಡ ವಿಶ್ವವಿದ್ಯಾಲಯದ ಬೆಳ್ಳಿ ಹಬ್ಬದ ಅಂಗವಾಗಿ ಸರ್ಕಾರವು ೨೦೧೭-೧೮ನೇ ಸಾಲಿನ ಆಯವ್ಯಯ ಭಾಷಣದಲ್ಲಿ ಮೂಲಭೂತ ಸೌಲಭ್ಯ ಹಾಗೂ ಅಭಿವೃದ್ಧಿಗಾಗಿ ರೂ. ೨೫.೦೦ ಕೋಟಿ ಘೋಷಿಸಿರುವ ಹಿನ್ನೆಲೆಯಲ್ಲಿ ಈ ಸಂಬಂಧ ಕುಲಪತಿಯವರ ನಿರ್ದೇಶನದಲ್ಲಿ ಕ್ರಿಯಾ ಯೋಜನೆ ಮತ್ತು ನೀಲನಕ್ಷೆಯನ್ನು ಸಿದ್ಧಪಡಿಸಿ ತುರ್ತಾಗಿ ದಿನಾಂಕ ೨೫, ೨೬-೦೪-೨೦೧೭ರ ಒಳಗಾಗಿ ಸರ್ಕಾರಕ್ಕೆ ಸಲ್ಲಿಸಲು ಸಭೆ ಸೂಚಿಸಿತು.

ಕುಲಸಚಿವರ ವಂದನೆಗಳೊಂದಿಗೆ ಸಭೆಯು ಮುಕ್ತಾಯಗೊಂಡಿತು.

ಕುಲಸಚಿವರು
ಪದನಿಮಿತ್ತ ಕಾರ್ಯದರ್ಶಿ

ಕುಲಪತಿಗಳು
ಅಧ್ಯಕ್ಷರು